ಸಿ.ಸಿ. ನಂ.701/2023

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಮೇಶ | ಪಿ.ಡಬ್ಲ್ಯೂ- 3 |
| ತಂದೆಯ ಹೆಸರು | ಃ | ಲಿಂಗಪ್ಪ | ಸಿ.ಡಬ್ಲ್ಯೂ- 3 |
| ವಯಸ್ಸು | ಃ | 55 ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ವ್ಯವಸಾಯ | ದಿಃ 15/09/2025 |
| ವಾಸ | ಃ | ರಿಪ್ಪನ್ ಪೇಟೆ | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ಸುಮಾರು 3 ವರ್ಷಗಳ ಹಿಂದೆ ಸಂಜೆ ಸುಮಾರು 04-00 ಗಂಟೆಗೆ ನಾನು ರಿಪ್ಪನ್ ಪೇಟೆ ಪೋಲಿಸ್ ಠಾಣೆಯಲ್ಲಿ ಪೋಲೀಸರ ಕೋರಿಕೆಯ ಮೇರೆಗೆ ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ.-2 ಮತ್ತು 3 ಮಹಜರ್ ಮತ್ತು ಕಚ್ಚಾ ನಕ್ಷೆಯನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿ.ಪಿ.-2(ಸಿ) ಮತ್ತು ನಿ.ಪಿ.-3(ಸಿ) ಎಂದು ಗುರುತಿಸಲಾಯಿತು. ನಿ.ಪಿ.-2 ಮತ್ತು 3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಬೇಕೆಂದು ಮಾನ್ಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು. )

ಸಿ.ಸಿ. ನಂ.**701/2023**

**ಪಾಟೀ ಸವಾಲುಃ-** ಮಾನ್ಯ **ಸ.ಸ.ಅ.** ರವರಿಂದ.

ದಿನಾಂಕ **08.11.2022** ರಂದು ರಿಪ್ಪನ್ ಪೇಟೆಯ ಸಿದ್ದಪ್ಪನಗುಡಿ ಬಸ್ ನಿಲ್ದಾಣದ ಹತ್ತಿರ ಪೋಲೀಸರು ಚಾ.ಸಾ.**-2** ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾ.ಸಾ.**-4** ರವರ ಸಮಕ್ಷಮ ಸಂಜೆ **04-00** ರಿಂದ **05-00** ಗಂಟೆಯವರೆಗೆ ನಿ.ಪಿ.**-2** ರಂತೆ ಮಹಜರ್ ಕ್ರಮ ಜರುಗಿಸಿ ನಿ.ಪಿ.**-3** ರಂತೆ ಕಚ್ಚಾ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಮಾಹಿತಿ ಇದ್ದು ಪಂಚನಾಮೆಯಲ್ಲಿ ಭಾಗವಹಿಸಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**- ಆರೋಪಿ ಪರ ಶ್ರೀ **ವಿ.ಎಸ್.ಕೆ.** ವಕೀಲರು ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.